# ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆಸಂಖ್ಯೆ | : 125 (153) |
| ಸದಸ್ಯರ ಹೆಸರು | : ಶ್ರೀ ಕೆ. ವಿವೇಕಾನಂದ (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : 17.08.2026 |
| ಉತ್ತರಿಸುವ ಸಚಿವರು | : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮೈಸೂರು, ಮಂಡ್ಯ, ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳ ವ್ಯಾಪ್ತಿಗೆ ಶಾಲಾ ಶಿಕ್ಷಣ ಇಲಾಖೆಯಿಂದ ಎಷ್ಟು ಕೆ.ಪಿ.ಎಸ್ ಶಾಲೆಗಳನ್ನು ಮಂಜೂರು ಮಾಡಲಾಗಿದೆ; ಮಂಜೂರಾದ ಎಷ್ಟು ಶಾಲೆಗಳು ಕಾರ್ಯನಿರ್ವಹಿಸುತ್ತಿವೆ; (ತಾಲ್ಲೂಕುವಾರು ಮಾಹಿತಿ ನೀಡುವುದು); | ಮೈಸೂರು, ಮಂಡ್ಯ, ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳ ವ್ಯಾಪ್ತಿಗೆ ಶಾಲಾ ಶಿಕ್ಷಣ ಇಲಾಖೆಯಿಂದ ಒಟ್ಟು 184 ಸರ್ಕಾರಿ ಶಾಲೆಗಳನ್ನು ಕೆ.ಪಿ.ಎಸ್. ಶಾಲೆಗಳನ್ನಾಗಿ ಉನ್ನತೀಕರಿಸಲಾಗುತ್ತಿದೆ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ 1 ಉರ್ದು ಮಾಧ್ಯಮದ ಶಾಲೆಯನ್ನು ಕೆ.ಪಿ.ಎಸ್ ಶಾಲೆಯನ್ನಾಗಿ ಉನ್ನತೀಕರಿಸಲಾಗುತ್ತಿದೆ. ಮಂಜೂರಾದ ಎಲ್ಲಾ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ತಾಲ್ಲೂಕುವಾರು ಮಾಹಿತಿಯನ್ನು **ಅನುಬಂಧ**ದಲ್ಲಿ ಒದಗಿಸಲಾಗಿದೆ. |
| ಆ) | ಈ ನಾಲ್ಕು ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕೆ.ಪಿ.ಎಸ್ ಶಾಲೆಗಳಿಗೆ ಅನುಗುಣವಾಗಿ ವಿಷಯಾದಾರಿತ ಶಿಕ್ಷಕರ ನೇಮಕವನ್ನು ಮಾಡಲಾಗಿದೆಯೇ; ಈ ಕೆ.ಪಿ.ಎಸ್. ಶಾಲೆಗಳಿಗೆ ಸ್ವಂತ ಕಟ್ಟಡ ಇವೆಯೇ; ಇದ್ದಲ್ಲಿ, ಆ ಕಟ್ಟಡಗಳಲ್ಲಿ ಶೌಚಾಲಯದ ವ್ಯವಸ್ಥೆ ಇದೆಯೆ; | ಈ ನಾಲ್ಕು ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕೆ.ಪಿ.ಎಸ್ ಶಾಲೆಗಳಿಗೆ ವಿದ್ಯಾರ್ಥಿಗಳ ಸಂಖ್ಯೆಗ ಅನುಗುಣವಾಗಿ ವಿಷಯಾಧಾರಿತ ಶಿಕ್ಷಕರನ್ನು ಒದಗಿಸಲಾಗಿದೆ. ಶಿಕ್ಷಕರ ಹುದ್ದೆಗಳು ಖಾಲಿ ಇದ್ದಲ್ಲಿ ಅಂತಹ ಶಾಲೆಗಳಿಗೆ ಅತಿಥಿ ಶಿಕ್ಷಕರನ್ನು ಒದಗಿಸಲಾಗಿದೆ. ಈ ಎಲ್ಲಾ ಕೆ.ಪಿ.ಎಸ್. ಶಾಲೆಗಳು ಸ್ವಂತ ಕಟ್ಟಡ ಹೊಂದಿದ್ದು, ಆ ಕಟ್ಟಡಗಳಲ್ಲಿ ಶೌಚಾಲಯದ ವ್ಯವಸ್ಥೆ ಇರುತ್ತದೆ.<br>ಮೂಲಭೂತ ಸೌಕರ್ಯಗಳ ಕೊರತೆಯಿದ್ದಲ್ಲಿ ಅಂತಹ ಶಾಲೆಗಳಿಗೆ ವಿದ್ಯಾರ್ಥಿಗಳ ಸಂಖ್ಯೆ, ಅಗತ್ಯತೆ ಮತ್ತು ಅರ್ಹತೆಯಂತೆ ಅನುದನದ ಲಭ್ಯತೆಯನ್ನಾಧರಿಸಿ ರೂಪಿಸಿದ ಕ್ರಿಯಾಯೋಜನೆಯಂತೆ ಅನುಮೋದನೆ ನೀಡಿ ಕೊರತೆಗಳನ್ನು ನಿವಾರಿಸಲು ಕ್ರಮವಹಿಸಲಾಗುತ್ತಿದೆ. |
| ಇ) | ಸದರಿ ಕೆ.ಪಿ.ಎಸ್. ಶಾಲೆಗಳ ಅಭಿವೃದ್ಧಿ ಕೆಲಸ ಕಾರ್ಯಗಳಿಗೆ | 1. 2018 ರಿಂದ ಈಗಾಗಲೇ ಅಸ್ತಿತ್ವದಲ್ಲಿರುವ ಕೆಪಿಎಸ್ ಶಾಲೆಗಳಿಗೆ 2026-27ನೇ ಸಾಲಿಗೆ |

| | | |
|---|---|---|
| | ಸರ್ಕಾರ ಇನ್ನೂ ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡಲು ಯಾವ ಕ್ರಮವನ್ನು ಕೈಗೊಂಡಿದೆ? | ರಾಜ್ಯದ 326 ಕೆಪಿಎಸ್ ಶಾಲೆಗಳಿಗೆ ಮೂಲಸೌಕರ್ಯ ಒದಗಿಸಲು ರೂ.2000.00 ಲಕ್ಷಗಳನ್ನು ಒದಗಿಸಲಾಗಿದ್ದು, ಶಾಲೆಗಳಲ್ಲಿ ವ್ಯಾಸಂಗ ಮಾಡುವ ಮಕ್ಕಳ ಹಾಜರಾತಿಗೆ ಅನುಗುಣವಾಗಿ ಹಾಗೂ ಅವಶ್ಯವಿರುವ ಮೂಲಸೌಲಭ್ಯಗಳ ಬಗ್ಗೆ ಸಂಬಂಧಪಟ್ಟ ಜಿಲ್ಲೆಗಳಿಂದ ಬರುವ ಪ್ರಸ್ತಾವನೆಗಳನ್ನು ಆಧರಿಸಿ ಅರ್ಹತೆ ಮತ್ತು ಆದ್ಯತೆಯಂತೆ ಕ್ರಿಯಾಯೋಜನೆಯನ್ನು ರೂಪಿಸಿ, ಅನುದಾನದ ಲಭ್ಯತೆಗೆ ಅನುಗುಣವಾಗಿ ಅನುಮೋದನೆ ನೀಡಿ ಮೂಲಸೌಲಭ್ಯಗಳನ್ನು ಒದಗಿಸಿ ಕೊರತೆಯನ್ನು ನೀಗಿಸಲು ಕ್ರಮ ವಹಿಸಲಾಗುತ್ತಿದೆ.<br>2. ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್ ಸಾಲ ಯೋಜನೆಯಡಿ ಉನ್ನತೀಕರಿಸಲಾಗುತ್ತಿರುವ 500 ಕೆಪಿಎಸ್ ಶಾಲೆಗಳಲ್ಲಿ ಕನಿಷ್ಟ 1200 ವಿದ್ಯಾರ್ಥಿಗಳಿಗೆ ವ್ಯಾಸಂಗಕ್ಕಾಗಿ ಮೂಲಸೌಕರ್ಯಗಳನ್ನು ಅಭಿವೃದ್ಧಿ ಪಡಿಸಲು ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಲಾಗುತ್ತಿದ್ದು, ಅದನ್ನು ಆಧರಿಸಿ ಹಂತ ಹಂತವಾಗಿ ಮೂಲಸೌಕರ್ಯಗಳನ್ನು ಪ್ರತಿ ಶಾಲೆಗೆ ರೂ.2.00 ರಿಂದ 4.00 ಕೋಟಿಗಳಲ್ಲಿ ಉನ್ನತೀಕರಿಸಲಾಗುವುದು, 2026-27 ನೇ ಸಾಲಿಗೆ ಸದರಿ ಕೆಪಿಎಸ್ ಶಾಲೆಗಳಿಗೆ ಮೂಲಸೌಕರ್ಯ ಒದಗಿಸಲು ರೂ.10000.00 ಲಕ್ಷಗಳನ್ನು ಒದಗಿಸಲಾಗಿದೆ.<br>3. ಪಿಎಂ ಶ್ರೀ ಕೆಪಿಎಸ್ ಶಾಲೆಗಳಿಗೆ (ಅನುಮೋದಿತ 590 ಶಾಲೆಗಳು) ಕೇಂದ್ರ ಸರ್ಕಾರದ ಪಿಎಂ ಶ್ರೀ ಯೋಜನೆಯಡಿ ಮೂಲಸೌಕರ್ಯ ಮತ್ತು ಕಲಿಕಾ ಸೌಕರ್ಯಗಳ ಅಭಿವೃದ್ಧಿಗೆ 2026-27 ನೇ ಸಾಲಿಗೆ ರೂ.16430.2097 ಲಕ್ಷಗಳು ಅನುಮೋದನೆಯಾಗಿದ್ದು, ಶಾಲೆಗಳಲ್ಲಿ ವ್ಯಾಸಂಗ ಮಾಡುವ ಮಕ್ಕಳ ಹಾಜರಾತಿಗೆ ಅನುಗುಣವಾಗಿ ಹಾಗೂ ಅವಶ್ಯವಿರುವ ಮೂಲಸೌಲಭ್ಯಗಳ ಬಗ್ಗೆ ಸಂಬಂಧಪಟ್ಟ ಜಿಲ್ಲೆಗಳಿಂದ ಬರುವ ಪ್ರಸ್ತಾವನೆಗಳನ್ನು ಆಧರಿಸಿ ಅರ್ಹತೆ ಮತ್ತು ಆದ್ಯತೆಯಂತೆ ಕ್ರಿಯಾಯೋಜನೆಯನ್ನು ರೂಪಿಸಿ, ಅನುದಾನದ ಲಭ್ಯತೆಗೆ ಅನುಗುಣವಾಗಿ ಅನುಮೋದನೆ ನೀಡಿ |

| | | |
|---|---|---|
| | | ಮೂಲಸೌಲಭ್ಯಗಳನ್ನು ಒದಗಿಸಿ ಕೊರತೆಯನ್ನು ನೀಗಿಸಲು ಕ್ರಮ ವಹಿಸಲಾಗುತ್ತಿದೆ.<br>4. ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಉನ್ನತೀಕರಿಸಲಾಗುತ್ತಿರುವ 103 ಕೆಪಿಎಸ್ ಶಾಲೆಗಳಲ್ಲಿ ಕನಿಷ್ಠ 1200 ವಿದ್ಯಾರ್ಥಿಗಳಿಗೆ ವ್ಯಾಸಂಗ ಮಾಡಲು ಅವಕಾಶ ಕಲ್ಪಿಸಲು ಅಗತ್ಯ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಅಲ್ಪಸಂಖ್ಯಾತ ಕಲ್ಯಾಣ ಇಲಾಖೆಯಿಂದ ಕ್ರಮವಹಿಸಲಾಗುತ್ತಿದೆ. |

ಸಂಖ್ಯೆ: ಇಪಿ 228 ಯೋಸಕ 2026

(ಎಸ್.ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

## 4 ಜಿಲ್ಲೆಗಳ ಕೆಪಿಎಸ್ ಶಾಲೆಗಳ ಮಾಹಿತಿ

| ಕ್ರ.ಸಂ | ಜಿಲ್ಲೆ | ತಾಲ್ಲೂಕು | 2018 ರಿಂದ ಈವರೆಗೂ ಪ್ರಾರಂಭಿಸಲಾಗಿರುವ ಕೆಪಿಎಸ್ ಶಾಲೆಗಳು | ಎಡಿಬಿ ಸಾಲ ಯೋಜನೆಯಡಿ ಉನ್ನತೀಕರಿಸಲಾಗುತ್ತಿರುವ ಕೆಪಿಎಸ್ ಶಾಲೆಗಳು(ಅನುಮೋದನೆ 500) | ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಕೆಪಿಎಸ್ ಶಾಲೆಗಳನ್ನಾಗಿ ಉನ್ನತೀಕರಿಸಲಾಗುತ್ತಿರುವ ಉರ್ದು ಮಾಧ್ಯಮದ ಶಾಲೆಗಳು | ಪಿಎಂ ಶ್ರೀ ಕೆಪಿಎಸ್ ಶಾಲೆಗಳು (590 ಶಾಲೆಗಳಲ್ಲಿ ಪುನರಾವರ್ತನೆಗೊಂಡಿರುವ 22 ಶಾಲೆಗಳನ್ನು ಹೊರತುಪಡಿಸಿ) | ಒಟ್ಟು |
|---|---|---|---|---|---|---|---|
| 1 | ಚಾಮರಾಜನಗರ | ಚಾಮರಾಜ ನಗರ | 1 | 7 | 1 | 3 | 12 |
| | | ಗುಂಡ್ಲುಪೇಟೆ | 1 | 2 | | 3 | 6 |
| | | ಹನೂರು | 1 | 2 | | 3 | 6 |
| | | ಕೊಳ್ಳೇಗಾಲ | 0 | 1 | | 2 | 3 |
| | | ಯಳಂದೂರು | 1 | 0 | | 2 | 3 |
| | | ಒಟ್ಟು | 4 | 12 | 1 | 13 | 30 |
| 2 | ಮಂಡ್ಯ | ಕೃಷ್ಣರಾಜಪೇಟೆ | 2 | 2 | | 1 | 5 |
| | | ಮದ್ದೂರು | 1 | 4 | | 1 | 6 |
| | | ಮಳವಳ್ಳಿ | 1 | 3 | | 2 | 6 |
| | | ಮಂಡ್ಯ ಉತ್ತರ | 1 | 1 | | 0 | 2 |
| | | ಮಂಡ್ಯ ದಕ್ಷಿಣ | 1 | 3 | | 1 | 5 |
| | | ನಾಗಮಂಗಲ | 1 | 3 | | 3 | 7 |
| | | ಪಾಂಡವಪುರ | 1 | 3 | | 2 | 6 |
| | | ಶ್ರೀರಂಗಪಟ್ಟಣ | 1 | 3 | | 1 | 5 |
| | | ಒಟ್ಟು | 9 | 22 | | 11 | 42 |
| 3 | ಮೈಸೂರು | ಹೆಚ್ ಡಿ ಕೋಟೆ | 2 | 3 | | 3 | 8 |
| | | ಹುಣಸೂರು | 1 | 2 | | 3 | 6 |
| | | ಕೆ ಆರ್ ನಗರ | 1 | 3 | | 3 | 7 |
| | | ಮೈಸೂರು ಉತ್ತರ | 1 | 4 | | 1 | 6 |
| | | ಮೈಸೂರು ದಕ್ಷಿಣ | 1 | 2 | | 1 | 4 |
| | | ಮೈಸೂರು ಗ್ರಾಮಾಂತರ | 2 | 6 | | 0 | 8 |
| | | ನಂಜನಗೂಡು | 1 | 3 | | 3 | 7 |
| | | ಪಿರಿಯಾಪಟ್ಟಣ | 2 | 3 | | 3 | 8 |
| | | ಟಿ ನರಸೀಪುರ | 1 | 4 | | 3 | 8 |
| | | ಒಟ್ಟು | 12 | 30 | | 20 | 62 |

| ಕ್ರ.ಸಂ | ಜಿಲ್ಲೆ | ತಾಲ್ಲೂಕು | 2018 ರಿಂದ ಈವರೆಗೂ ಪ್ರಾರಂಭಿಸಲಾಗಿರುವ ಕೆಪಿಎಸ್ ಶಾಲೆಗಳು | ಎಡಿಬಿ ಸಾಲ ಯೋಜನೆಯಡಿ ಉನ್ನತೀಕರಿಸಲಾಗುತ್ತಿರುವ ಕೆಪಿಎಸ್ ಶಾಲೆಗಳು(ಅನುಮೋದನೆ 500) | ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಕೆಪಿಎಸ್ ಶಾಲೆಗಳನ್ನಾಗಿ ಉನ್ನತೀಕರಿಸಲಾಗುತ್ತಿರುವ ಉರ್ದು ಮಾಧ್ಯಮದ ಶಾಲೆಗಳು | ಪಿಎಂ ಶ್ರೀ ಕೆಪಿಎಸ್ ಶಾಲೆಗಳು (590 ಶಾಲೆಗಳಲ್ಲಿ ಪುನರಾವರ್ತನೆಗೊಂಡಿರುವ 22 ಶಾಲೆಗಳನ್ನು ಹೊರತುಪಡಿಸಿ) | ಒಟ್ಟು |
|---|---|---|---|---|---|---|---|
| 4 | ಹಾಸನ | ಆಲೂರು | 1 | 1 | | 2 | 4 |
| | | ಅರಕಲಗೂಡು | 1 | 2 | | 2 | 5 |
| | | ಅರಸೀಕೆರೆ | 1 | 7 | | 2 | 10 |
| | | ಬೇಲೂರು | 1 | 1 | | 2 | 4 |
| | | ಚನ್ನರಾಯಪಟ್ಟಣ | 2 | 3 | | 2 | 7 |
| | | ಹಾಸನ | 4 | 3 | | 2 | 9 |
| | | ಹೊಳೆನರಸೀಪುರ | 3 | 2 | | 3 | 8 |
| | | ಸಕಲೇಶಪುರ | 2 | 0 | | 2 | 4 |
| | | ಒಟ್ಟು | 15 | 19 | | 17 | 51 |
| | | **ಒಟ್ಟಾರೆ** | 40 | 83 | 1 | 61 | 185 |

ಹಿರಿಯ ಸಹಾಯಕ ನಿರ್ದೇಶಕರು
ಹಾಗೂ ಸಾರ್ವಜನಿಕ ಸಂಪರ್ಕಾಧಿಕಾರಿಗಳು
ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು.